

**ನನ್ನ ಸ್ವಾತಂತ್ರ್ಯ**

## ಮಹಿಳೆ ಇನ್ನಷ್ಟು ಸ್ವಾವಲಂಬಿಯಾಗಬೇಕಿದೆ...



ನನ್ನ ಮಟ್ಟಿಗೆ ಸ್ವಾತಂತ್ರ್ಯ ಎಂದರೆ ಸ್ವಚ್ಛಂದ ಜೀವನ. ಇಂದು ಮಹಿಳೆ ಪುರುಷರಿಗಿಂತಲೂ ಬಹುತೇಕ ಎಲ್ಲ ಕ್ಷೇತ್ರಗಳಲ್ಲಿ ಮುಂದಿದ್ದಾಳೆ. ಹಿಂದೆಯೂ ಅನೇಕ ಮಹಿಳೆಯರು, ಸಾಧಕಿಯರು ಎಲ್ಲರೂ ಹೆಮ್ಮೆಪಡುವಂಥ ಕೆಲಸ ಮಾಡಿದ್ದರು, ಹೋರಾಟದ ಬದುಕು ರೂಪಿಸಿದ್ದರು. ಇವೆಲ್ಲವನ್ನು ಇಂದಿನ ಯುವಕರಿಗೆ ಪರಿಚಯ ಮಾಡಿಸಿದರೆ ಮಹಿಳೆಯರ ಬಗ್ಗೆ ಅವರಿಗೂ ಹೆಮ್ಮೆ ಮೂಡುತ್ತದೆ. ಸ್ವಾತಂತ್ರ್ಯದ ಅಮೃತಮಹೋತ್ಸವ ಆಚರಣೆಯೂ ಅರ್ಥಪೂರ್ಣವಾಗುತ್ತದೆ. ಸಂಗೀತ ಕ್ಷೇತ್ರದಲ್ಲಂತೂ ಮಹಿಳೆಯರು ಹಲವಾರು ಛಾಪು ಮೂಡಿಸುವಂಥ ಕೆಲಸ ಮಾಡಿದ್ದಾರೆ. ಇದನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಮಾತ್ರ ಇನ್ನೂ ಹೆಚ್ಚಾಗಿ ಆಗಬೇಕಾಗಿದೆ. ಇಂದು ಮಹಿಳೆಯರಿಗೆ ಎಲ್ಲ ರೀತಿಯಲ್ಲಿ ಸಮಾನತೆಯನ್ನೂ ಒದಗಿಸಲಾಗಿದೆ. ಇದರ ಸದುಪಯೋಗವನ್ನು ಮಹಿಳೆಯರು ಪಡೆಯಬೇಕಾಗಿದೆ.

ನಮ್ಮ ಹೆಮ್ಮೆಯ ಪ್ರೀತಿಯ ಜನ್ಮಭೂಮಿ ಭಾರತ, ಸ್ವಾತಂತ್ರ್ಯವನ್ನು ಪಡೆದು 75 ವರ್ಷಗಳಾಗಿ ಅಮೃತ ಮಹೋತ್ಸವವನ್ನು ಆಚರಿಸುತ್ತಿರುವುದು ಅತ್ಯಂತ ಹೆಮ್ಮೆಯ ಖುಷಿಯ ವಿಷಯ. ಹೌದು ಭಾರತ ಸ್ವತಂತ್ರವಾಗಿದೆ. ಎಷ್ಟೊಂದು ಅಭಿವೃದ್ಧಿಯನ್ನು ಕಂಡಿದೆ, ಕಾಣುತ್ತಿದೆ. ವಿಶ್ವದ ಪ್ರಮುಖ ದೇಶಗಳ ಸಾಲಿನಲ್ಲಿ ನಿಂತಿದೆ. ಆದರೆ ನಿಜವಾಗಿಯೂ ಭಾರತದಲ್ಲಿರುವ ಎಲ್ಲ ಧರ್ಮದ, ವರ್ಗದ ಮಹಿಳೆಯರಿಗೆ ಸಂಪೂರ್ಣ ಸ್ವಾತಂತ್ರ್ಯ ಸಿಕ್ಕಿದೆ ಎಂದು ಅನಿಸುವುದಿಲ್ಲ. ಕೆಲವೊಮ್ಮೆ ಸ್ವಾತಂತ್ರ್ಯ ಸ್ವೇಚ್ಛೆಯಾಗಿ ಬದಲಾಗಿ ಯುವ ಜನತೆಯ, ಬಾಳಿನ ದಿಕ್ಕನ್ನು ತಪ್ಪಿಸುವಂತಿದೆ... ಮತ್ತೊಂದೆಡೆ ಮಹಿಳೆಯರಿಗೆ ಶೇಕಡ 100 ಅಭಿವ್ಯಕ್ತಿ, ಜೀವನ, ವ್ಯಕ್ತಿಗತ, ವಿದ್ಯೆ, ವೃತ್ತಿ, ಸಂಸಾರ, ರಾಜಕೀಯ, ನಿರ್ಧಾರ, ಸಾಮಾಜಿಕ ಸ್ವಾತಂತ್ರ್ಯಗಳು ಬರಬೇಕಿದೆ. ಮನೆಯಾಚೆ ಕಾಲಿಡುವ ಸ್ವಾತಂತ್ರ್ಯ ಎಷ್ಟೋ ಹೆಣ್ಣು ಮಕ್ಕಳಿಗೆ ಇನ್ನೂ ಸಿಕ್ಕಿಲ್ಲ, ನಿರಂತರವಾಗಿ ಹೆಣ್ಣಿನ ಮೇಲಿನ ಶೋಷಣೆ, ಅತ್ಯಾಚಾರ ಹೆಚ್ಚುತ್ತಲೇ ಇದೆ. ಎಲ್ಲಾ ಕ್ಷೇತ್ರಗಳಲ್ಲಿಯೂ ಹೆಣ್ಣು, ಈಗಲೂ ತನ್ನದೇ ಆದ ಸ್ಥಾನ, ಗೌರವ ಪಡೆಯಲು ಹೋರಾಡಬೇಕಾಗಿದೆ. ಭಾರತೀಯ ಮಹಿಳೆ ಇನ್ನಷ್ಟು ಸ್ವಾವಲಂಬಿಯಾಗಲಿ ಮಧ್ಯರಾತ್ರಿಯ ನಿರ್ಭಯ ಸ್ವಾತಂತ್ರ್ಯ ಸಿಗಲಿ ಎಂದು ಹಾರೈಸೋಣ.

**-ಶಮಿತಾ ಮಲ್ನಾಡ್,** ಗಾಯಕಿ

ಮಾನಸಿಕವಾಗಿ, ಭಾವನಾತ್ಮಕವಾಗಿ ಪ್ರೇರೇಪಿಸುತ್ತಿದ್ದವು.

ಇವುಗಳ ಜೊತೆಗೆ ಪತ್ರಿಕಾ ಬರಹ, ಭಾಷಣ, ಕರಪತ್ರ, ಚಳವಳಿ ನಾಯಕರ ನಡೆ ನುಡಿ, ಸಾಮಾನ್ಯ ಗಂಡು ಹೆಣ್ಣುಗಳ ಕ್ರಿಯೆ, ಹಾಡು, ನಾಟಕ ಎಲ್ಲವೂ ಸೇರಿ ಸ್ವಾತಂತ್ರ್ಯ ಚಳವಳಿ ದಿನನಿತ್ಯದ ವಿಧ್ಯುಕ್ತ ಆಚರಣೆಯಂತೆ ಬೆಳೆಯುತ್ತಿತ್ತು. ಎರಡನೇ ಮಹಾಯುದ್ಧದ ಕಾಲದಲ್ಲಿ ಸ್ವಾತಂತ್ರ್ಯ ಚಳವಳಿಯ ನಾಯಕರು ಬ್ರಿಟಿಷ್ ಸರ್ಕಾರದ ವಿರುದ್ಧ ತಳೆದ ಬಿಗಿ ನಿಲುವಿನ ನಂತರವಂತೂ ಬ್ರಿಟಿಷರಿಗೆ ಇನ್ನು ಈ ದೇಶವನ್ನಾಳುವುದು ಅಸಾಧ್ಯ ಎಂಬುದು ಗೊತ್ತಾಯಿತು. ಆದರೂ ಬ್ರಿಟಿಷರ ಒಡೆದು ಆಳುವ ನೀತಿ, ಕಪಟಗಳಿಂದಾಗಿ ಚಳವಳಿಗೆ ಹಿನ್ನಡೆಯಾಗುತ್ತಲೇ ಇತ್ತು. ಆ ಘಟ್ಟದಲ್ಲಿ ಹಠಾತ್ತನೆ 1942ರ ಆಗಸ್ಟ್ 8ರ ಸಂಜೆ ಸಿಡಿದ 'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಎಂಬ ಗಾಂಧೀ ಕರೆ; 'ಡೂ ಆರ್ ಡೈ' (ಮಾಡು ಇಲ್ಲವೆ ಮಡಿ) ಎಂಬ ಹೋರಾಟದ ಮಂತ್ರ ಸ್ವಾತಂತ್ರ್ಯ ಹೋರಾಟವನ್ನು ನಿರ್ಣಾಯಕ ಘಟ್ಟಕ್ಕೆ ತಂದು ನಿಲ್ಲಿಸಿತು.

'ಬ್ರಿಟಿಷರೇ ಭಾರತ ಬಿಟ್ಟು ತೊಲಗಿ' ಕರೆ ಹೊರಬಿದ್ದ ರಾತ್ರಿಯೇ ಗಾಂಧಿ, ನೆಹರೂ, ಪಟೇಲ್, ಮೌಲಾನ ಥರದ ಮುಂಚೂಣಿ ನಾಯಕರ ಬಂಧನವಾದ ತಕ್ಷಣ ಭಾರತದ ಒಳಗೇ ಹರಿಯುತ್ತಿದ್ದ ವಿವಿಧ ಬಂಡುಕೋರ ಧಾರೆಗಳು ಸ್ಫೋಟಗೊಂಡವು. ಭೂಗತ ಹೋರಾಟಗಳೂ ಆರಂಭಗೊಂಡವು. ಭೂಗತ ಬಾನುಲಿಯೂ ಮೊಳಗಿತು. ಪೊಲೀಸ್ ಹಿಂಸೆ, ಜನರ ಪ್ರತಿ ಹಿಂಸೆಗಳು ಶುರುವಾದವು. ಅವರೆಗೆ ನಡೆಯುತ್ತಿದ್ದ ಉದಾರವಾದಿ, ಸುಧಾರಣವಾದಿ, ಕಮ್ಯುನಿಸ್ಟ್, ಸಂಪ್ರದಾಯವಾದಿ, ಸಮಾಜವಾದಿ ಮಾರ್ಗಗಳ ಹಲವು ಧಾರೆಗಳು ಈಗ ಮಹಾನ್ ಸ್ವಾತಂತ್ರ್ಯ ಸಂಗ್ರಾಮದ ನಿರ್ಣಾಯಕ ಧಾರೆಗಳಾದವು. ಕೇವಲ ಬ್ರಿಟಿಷ್ ಸರ್ಕಾರದ ವಿರುದ್ಧ ಮಾತ್ರವಲ್ಲದೇ ದೇಶದ ಒಳ ಕಾಯಿಲೆಗಳನ್ನೂ ಗುಣಪಡಿಸುವ ಆಶಯದಿಂದ ಏಕಕಾಲಕ್ಕೆ ಹಲವು ಚಳವಳಿಗಳು ನಡೆಯತೊಡಗಿದ್ದ ಈ ಸಂಕೀರ್ಣ ದೇಶವನ್ನು ನಿಯಂತ್ರಿಸುವುದು ಅಸಾಧ್ಯವೆಂಬುದು ಬ್ರಿಟಿಷ್ ಸರ್ಕಾರಕ್ಕೆ ಸ್ಪಷ್ಟವಾಗತೊಡಗಿತು. ಆದರೂ ಅನೇಕ ಬಗೆಯ ಯೋಜಿತ ಸಂಚುಗಳು, ಹುಸಿ ಒಪ್ಪಂದಗಳ ಸರಮಾಲೆಯನ್ನೇ ಮುಂದೊಡ್ಡಿ ಸ್ವಾತಂತ್ರ್ಯದ ಗಳಿಗೆಯನ್ನು ಮುಂದೂಡಲೆತ್ನಿಸಿದ ಬ್ರಿಟಿಷರು ಕೊನೆಗೆ ಭಾರತ ವಿಭಜನೆಯ ಪ್ರಕ್ರಿಯೆಗೆ ಕುಮ್ಮಕ್ಕು ಕೊಟ್ಟೇ ಇಲ್ಲಿಂದ ಕಾಲ್ತೆಗೆಯಲು ಸಿದ್ಧರಾದರು.

### 3

ಯಾವುದೇ ಪೂರ್ವ ಸಿದ್ಧತೆಯಿಲ್ಲದೆ ಹಠಾತ್ತನೆ ಎರಗಿದ ದೇಶ ವಿಭಜನೆ ತಂದ ಗೊಂದಲಗಳಿಂದ ಹುಟ್ಟಿದ ಭೀಕರ ಹಿಂಸೆಗಳು ಹಿಂದೂ, ಮುಸ್ಲಿಂ, ಸಿಖ್ ಮುಂತಾಗಿ ಹಲವು ಧರ್ಮಗಳ ಜನಮಾನಸಗಳಿಗೆ ಮಾಯಲಾಗದ ಗಾಯ ಉಂಟು ಮಾಡಿದವು. ಆದರೆ ಅಂಥ ಬಿಕ್ಕಟ್ಟಿನ ಕಾಲದಲ್ಲೂ, ಜಾತ್ಯತೀತ ಪ್ರಜ್ಞೆಯ ಜವಾಬ್ದಾರಿಯುತ ನೇತಾರರು ನಾಡು ಜೋಡಿಸುವ, ಜನರನ್ನು ಬೆಸೆಯುವ ಸಾಮರಸ್ಯದ ಭಾಷೆಯನ್ನು ಸ್ಪಷ್ಟವಾಗಿ ಬಳಸತೊಡಗಿದರು.